ಯಂತ್ರೋಪಕರಣಗಳ ಖರೀದಿ ಬಗ್ಗೆ

೪೯೦ ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು).—ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಳವಳ್ಳಿ ಭಾರತ್ ಸಿಲ್ಕ್ ಫಿಲೇಚರ್ ಮತ್ತು ರೇಷ್ಮೆ ಸರಕಾರ ಸಂಘವು ಯಾವ ಯಾವ ಯಂತ್ರೋಪಕರಣಗಳನ್ನು ಖರೀದಿಸಿರುವರು.

ಆ) ಯಂತ್ರೋಪಕರಣಗಳನ್ನು ಖರೀದಿಸುವ ಮುನ್ನ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆಯಲಾಗಿದೆಯೇ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ೧, ಬಹುತುದಿಗಳ ನೂಲು ಬಿಚ್ಚಾಣಿಕೆ ಯಂತ್ರಗಳು

೨. ಪಂರು ನೂಲು ಬಿಚ್ಚಾಣಿಕೆ ಯಂತ್ರಗಳು

೩. ಇದಕ್ಕೆ ಸಂಬಂಧಪಟ್ಟ ಇತರ ಸಲಕರಣೆಗಳು

ಆ) ಹೌದು.

ಬಟ್ಟೆಗಳನ್ನು ಒದಗಿಸುವ ಬಗ್ಗೆ

೪೮೭. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಮಕ್ಕಳಿಗಾಗಿ ಬಟ್ಟೆಗಳನ್ನು ಒದಗಿಸಲು ೧೯೮೯–೯೦ನೇ ಸಾಲಿಗೆ ಒದಗಿಸಲಾದ ಹಣವೆಷ್ಟು?

ಆ) ಆ ಪೈಕಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒದಗಿಸಲಾದ ಹಣವೆಷ್ಟು?

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ೧೯೮೯–೯೦ನೇ ಸಾಲಿನಲ್ಲಿ ಮಕ್ಕಳಿಗೆ ಬಟ್ಟೆಗಳನ್ನು ವಿತರಿಸಲಾಗಿದೆಯೇ ? ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—

ಅ) ರೂ. ೪೫,೬೧,೪೮೦–೦೦

ಆ) ರೂ. ೨,೮೯,೯೦೦–೦೦

ಇ) ಇಲ್ಲ. ಕಾರಣ, ೧೯೮೯–೯೦ನೇ ಸಾಲಿಗೆ ವಿದ್ಯಾರ್ಥಿಗಳ ನಿರ್ವಹಣೆಗೆಂದು ಆಯವ್ಯಯದಲ್ಲಿ ೪೨.೫೬ ಲಕ್ಷ ರೂ.ಗಳನ್ನು ಅನುದಾನವಾಗಿ ಜಿಲ್ಲಾಪರಿಷತ್ತಿಗೆ ಒದಗಿಸಿದೆ. ಹಣವನ್ನು ಅದೇ ಸಾಲಿನಲ್ಲಿ ಪೂರ್ಣವಾಗಿ ಖರ್ಚು ಮಾಡಲಾಗಿದೆ. ೧೯೮೯–೯೦ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮಾಡುವ ವಿಷಯವನ್ನು ದಿನಾಂಕ ೭–೬–೧೯೮೯ರಲ್ಲಿ ನಡೆದ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಚರ್ಚಿಸಲಾಯಿತು. ಆದರೆ, ಜಿಲ್ಲಾ ಪರಿಷತ್ತಿನಿಂದ ಬಟ್ಟೆ ಸರಬರಾಜು ಮಾಡಲು ಫೆಬ್ರವರಿ ೯೦ರಲ್ಲಿ ಆದೇಶ ಹೊರಡಿಸಿ ದಿ. ೨೮–೨–೧೯೯೦ರೊಳಗೆ ಬಟ್ಟೆಗಳನ್ನು ಸರಬರಾಜು ಮಾಡಲಂ ಟಿ.ಎ.ಪಿ.ಸಿ.ಎಂ.ಎಸ್, ನೆಲಮಂಗಲ, ಇವರಿಗೆ ಆದೇಶ ನೀಡಲಾಯಿತು. ಆದರೆ, ಸಂಸ್ಥೆಯವರು ಕಾಲಾವಕಾಶ ಕಡಿಮೆ ಇದ್ದುದರಿಂದ ಸಮವಸ್ತ್ರಗಳನ್ನು ಸರಬರಾಜು ಮಾಡದಿದ್ದ ಕಾರಣ ಇವರಿಗೆನೀಡಿದ ಆದೇಶವನ್ನು ರದ್ದು ಪಡಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರ ಮಾಸಾಶನ ದುರುಪಯೋಗ ಪಡಿಸಿರುವ ಬಗ್ಗೆ

೬೯೨. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ ಕ್ಷೇತ್ರ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿ ಎಷ್ಟು ಜನ ಅಂಗವಿಕಲರಿದ್ದಾರೆ,

ಆ) ಎಷ್ಟು ಜನ ಅಂಗವಿಕಲರಿಗೆ ಮಾಸಾಶನವನ್ನು ನೀಡಲಾಗುತ್ತಿದೆ.